ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 5, November-December 2022, Pp. 36- 40
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಆರ್ಥಿಕ ಅಭಿವೃದ್ಧಿಯಲ್ಲಿ ಬಾಬು ಜಗಜೀವನರಾಮ್‌ರವರ ಚಿಂತನೆಗಳ ಪ್ರಸ್ತುತತೆ

**ಗುರುಪ್ರಸಾದ್.ವಿ.ಡಿ***

*ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

***Abstract:***

*ಆಧುನಿಕ ಭಾರತದ ನಿರ್ಮಾಣ ಮತ್ತು ಬೆಳವಣಿಗೆಯಲ್ಲಿ ಬಾಬು ಜಗಜೀವನರಾಮ್ ರವರ ಹೆಸರು ಗಣ್ಯಸ್ಥಾನ ಪಡೆದಿದೆ. ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತದ ಎರಡೂ ಕಾಲಘಟ್ಟಗಳಲ್ಲಿನ ಘಟನೆಗಳು ಹಾಗೂ ವ್ಯಕ್ತಿಗಳ ನಡುವಣ ಕಾರ್ಯಕಾರಣ ಸಂಬಂಧದ ಪ್ರತ್ಯಕ್ಷದರ್ಶಿಗಳಾಗಿದ್ದವರು. ಅವರು ತಮ್ಮ ಇಡೀ 50 ವರ್ಷಗಳ ರಾಜಕೀಯ ಜೀವನದಲ್ಲಿ ಭಾರತದ ಆರ್ಥಿಕ ಅಭಿವೃದ್ಧಿಯ ದಿಕ್ಕು ದೆಸೆಗಳನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ದೇಶದ ಮತ್ತು ಜನತೆಯ ಸಮಸ್ಯೆಯನ್ನು ಅರಿಯುವ ಕುತೂಹಲ ಮತ್ತು ಉತ್ಸುಕತೆಯನ್ನು ಹೊಂದಿದ್ದರು. ವಿದ್ಯಾರ್ಥಿ ದೆಸೆಯಿಂದಲೇ ದಲಿತರು, ಕಾರ್ಮಿಕರು ಹಾಗೂ ಶೋಷಿತ ವರ್ಗಗಳನ್ನು ಸಂಘಟಿಸುವಲ್ಲಿ ನಾಯಕತ್ವದ ಪಾತ್ರ ವಹಿಸಿದವರು. ಅವರು ಭಾರತದಲ್ಲಿನ ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯ ಸಮಾಜವನ್ನು ಸ್ಥಾಪಿಸುವ ಮಹದಿಚ್ಛೆ ಹೊಂದಿದ್ದರು. ಈ ಹಿನ್ನಲೆಯಲ್ಲಿ ಆರ್ಥಿಕಾಭಿವೃದ್ಧಿಯಲ್ಲಿ ಡಾ.ಜಗಜೀವನ್‌ರಾಮ್‌ರವರ ಚಿಂತನೆಗಳ ಪ್ರಸ್ತುತ ಅಗತ್ಯತೆಯನ್ನು ಕುರಿತು ಪ್ರಸ್ತುತ ಲೇಖನದಲ್ಲಿ ವಿಮರ್ಶಿಸಲಾಗಿದೆ.*

***Keywords:*** *ಆರ್ಥಿಕ ಅಭಿವೃದ್ಧಿ, ಜಗಜೀವನ್‌ರಾಮ್, ಹಸಿರುಕ್ರಾಂತಿ, ಕಾರ್ಮಿಕ ಕಾಯ್ದೆ, ಕೈಗಾರಿಕ ಕಾಯ್ದೆ.*

## ಪೀಠಿಕೆ

ಜಗಜೀವನರಾಮ್‌ರವರು ನೆಹರೂರವರ ಮಧ್ಯಂತರ ಸರ್ಕಾರದಲ್ಲಿ ಕಾರ್ಮಿಕ ಮಂತ್ರಿಯಾಗಿ, ನಂತರದ ಅವಧಿಗಳಲ್ಲಿ ಸಾರಿಗೆ ಮತ್ತು ಸಂಪರ್ಕ ಮಂತ್ರಿಯಾಗಿ, ರೈಲ್ವೆ ಸಚಿವರಾಗಿ, ಆಹಾರ ಮತ್ತು ಕೃಷಿ ಸಚಿವರಾಗಿ ಹಾಗೂ ರಕ್ಷಣಾ ಸಚಿವರಾಗಿ ರಾಷ್ಟ್ರನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಜಗಜೀವನರಾಮ್‌ರವರು ತಮ್ಮ ಅಧಿಕಾರದ ಅವಧಿಯಲ್ಲಿ ಹಲವಾರು ಯೋಜನೆಗಳನ್ನು ಜಾರಿಗೆ ತಂದು ಅವುಗಳನ್ನು ಕಾರ್ಯರೂಪಕ್ಕೆ ತರಲು ಸದಾ ಆಡಳಿತ ಮಂತ್ರಗಳನ್ನು ಜಪಿಸುತ್ತಿದ್ದರು. ಅವರು ಮಂತ್ರಿಯಾಗಿ ಜಾರಿಗೆ ತಂದ ಹಲವಾರು ಕಾಯಿದೆಗಳು, ಕಾನೂನುಗಳು ಇಂದಿಗೂ ಸಹ ಬಡವರ ಪಾಲಿಗೆ ಸಂಜೀವಿನಿಯಾಗುವುದರ ಜೊತಗೆ, ಇವರ ಆರ್ಥಿಕ ಚಿಂತನೆಗಳು ಇಂದಿಗೂ ಪ್ರಸ್ತುತವೆನಿಸುತ್ತವೆ.

ಭಾರತದ ಪ್ರಸ್ತುತ ಆರ್ಥಿಕ ವ್ಯವಸ್ಥೆಯನ್ನು ವಿಶ್ಲೇಷಿಸಿದಾಗ ಅಭಿವೃದ್ಧಿಯು ಕುಂಠಿತಗೊಂಡಿರುವುದನ್ನು ಕಾಣಬಹುದು. ಭಾರತವು ಸ್ವಾತಂತ್ರ್ಯ ಪಡೆದು 57 ವರ್ಷಗಳಾದರೂ ಬಡತನ, ನಿರುದ್ಯೋಗ, ಭೂಮಿಯ ಅಸಮಾನ ಹಂಚಿಕೆ, ಕಾರ್ಮಿಕರ ಸಮಸ್ಯೆಗಳು, ಕೃಷಿಯ

***Please cite this article as:*** ಗುರುಪ್ರಸಾದ್. ವಿ.ಡಿ. (2022). ಆರ್ಥಿಕ ಅಭಿವೃದ್ಧಿಯಲ್ಲಿ ಬಾಬು ಜಗಜೀವನರಾಮ್‌ರವರ ಚಿಂತನೆಗಳ ಪ್ರಸ್ತುತತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(5), 36–40.

ಉತ್ಪಾದಕತೆ ಕುಂಠಿತವಾಗಿರುವಿಕೆ, ಕೈಗಾರೀಕರಣದ ಸಮಸ್ಯೆಗಳು ಹಾಗೂ ಊಳಿಗಮಾನ್ಯ ವ್ಯವಸ್ಥೆಯಂತಹ ಅನೇಕ ಸಮಸ್ಯೆಗಳು ಇನ್ನೂ ಜೀವಂತವಾಗಿವೆ.

ಈ ನಿಟ್ಟಿನಲ್ಲಿ ವಿವಿಧ ಇಲಾಖೆಯ ಮಂತ್ರಿಯಾಗಿ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿದ ಬಾಬುಜಗಜೀವನರಾಮ್‌ರವರ ಆರ್ಥಿಕ ಚಿಂತನೆಗಳು ಹಾಗೂ ಆರ್ಥಿಕ ಸುಧಾರಣೆಗಳು ಇಂದಿನ ಅರ್ಥವ್ಯವಸ್ಥೆಗೆ ಹೇಗೆ ಪ್ರಸ್ತುತವೆನಿಸುತ್ತವೆ ಎಂಬುದನ್ನು ಅರಿಯುವ ಮೂಲಕ ದೇಶದ ಪ್ರಸಕ್ತ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕಾಗಿದೆ.

"ರಾಜಕೀಯ ಸ್ವಾತಂತ್ರ್ಯಕ್ಕಿಂತ ಆರ್ಥಿಕ ಸ್ವತಂತ್ರ್ಯ ಮುಖ್ಯ".[1] ಎಂದು ನಂಬಿದ್ದ ಜಗಜೀವನರಾಮ್ ರವರು ಕರ್ಮಿಕರ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸಿದರು. 1946ರ ಮದ್ಯಂತರ ಸರ್ಕಾರದಲ್ಲಿ ಹಾಗೂ 1947ರಲ್ಲಿ ಸ್ವತಂತ್ರ ಭಾರತದ ಮೊದಲ ಕಾರ್ಮಿಕ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಸ್ವತಂತ್ರಪೂರ್ವದಲ್ಲೇ 1937ರಲ್ಲಿ 'ಖೇತಿಹಾರ್ ಮಜದೂರ್ ಸಭಾ' ಅಥವಾ ಕೃಷಿ ಕಾರ್ಮಿಕರ ಸಂಘಟನೆಯನ್ನು ಬಿಹಾರದಲ್ಲಿ ಸಂಘಟಿಸಿ ಬೇಗಾರ್ ನಂತಹ ನೀಚ ಪದ್ದತಿ, ಕಡಿಮೆ ವೇತನ ಹಾಗೂ ದೌರ್ಜನ್ಯಗಳ ವಿರುದ್ದ ಪ್ರತಿಭಟನೆ ನಡೆಸಿದ್ದರು.[2]

ಬಾಬು ಜಗಜೀವನರಾಮ್‌ರು ಕಾರ್ಮಿಕ ಸಚಿವರಾಗಿದ್ದಾಗ ಕಾರ್ಮಿಕರ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದಂತೆ 1946 ರ ಕೈಗಾರಿಕಾ ಉದ್ಯೋಗ ಕಾಯ್ದೆ, 1947 ರ ಮೈಕಾ ಗಣಿಗಳ ಕಾರ್ಮಿಕ ಕ್ಷೇಮನಿಧಿ ಕಾಯ್ದೆ, 1947 ರ ಕೈಗಾರಿಕಾ ವಿವಾದ ಕಾಯ್ದೆ, 1948 ರ ಹಡಗುಕಟ್ಟೆ ಕೆಲಸಗಾರರ ಕಾಯ್ದೆ, 1948 ರ ಕೈಗಾರಿಕಾ ಕಾಯ್ದೆ, 1948 ರ ಕಲ್ಲಿದ್ದಲು ಗಣಿ ಭವಿಷ್ಯನಿಧಿ ಮತ್ತು ಬೋನಸ್ ವ್ಯವಸ್ಥೆ ಕಾಯ್ದೆ, 1948 ರ ಕನಿಷ್ಠ ವೇತನ ಕಾಯ್ದೆ ಮತ್ತು ಕಾರ್ಮಿಕರ ರಾಜ್ಯ ವಿಮಾ ಕಾಯ್ದೆ, 1950 ರ ಕೈಗಾರಿಕಾ ಕಾಯ್ದೆ (ಅಪಲ್ಲೇಟ್ ಟ್ರಿಬ್ಯುನಲ್), 1951 ರ ಪ್ಲಾಂಟೇಷನ್ ಕಾರ್ಮಿಕರ ಕಾಯ್ದೆ ಮತ್ತು 1952 ರ ಕಲ್ಲಿದ್ದಲು ಗಣಿ ಕಾಯ್ದೆಗಳನ್ನು ಜಾರಿಗೊಳಿಸಿದ್ದರು[3].

ಭಾರತ ದೇಶದಲ್ಲಿ ಬಹುಸಂಖ್ಯಾತ ಕೃಷಿ ಮತ್ತು ಕೈಗಾರಿಕಾ ಕಾರ್ಮಿಕರು ಪರಿಶಿಷ್ಟ ಜಾತಿ ಮತ್ತು ವರ್ಗಗಳಿಂದಲೇ ಬಂದವರಾಗಿದ್ದು, ಕೋಟ್ಯಂತರ ಶೋಷಿತ ಕಾರ್ಮಿಕರ ಆಶಯಗಳನ್ನು ಈಡೇರಿಸುವಲ್ಲಿ ಜಗಜೀವನರಾಮ್‌ರು ಅಗಾಧವಾಗಿ ಶ್ರಮಿಸಿದರು. ಅವರು ತಮ್ಮ ಶ್ರಮದಿಂದಾಗಿ ಜಾತಿವ್ಯವಸ್ಥೆ ಹಾಗೂ ವಸಾಹತು ಆರ್ಥಿಕತೆಯಿಂದ ನರಳುತ್ತಿದ್ದ ಭಾರತವನ್ನು ಸಮಾಜವಾದ, ಜಾತ್ಯತೀತ ಹಾಗೂ ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ನಿರ್ಮಿಸಲು ಹಾಗೂ ಆರ್ಥಿಕವಾಗಿ ಅಭಿವೃದ್ಧಿಶೀಲ ದೇಶವಾಗಲು ಅಗತ್ಯವಾದ ಅಸ್ತಿಭಾರ ಹಾಕಿದರು.[4]

ಬಾಬುಜಗಜೀವನರಾಮ್‌ರು ಕಾರ್ಲ್‌ಮಾರ್ಕ್ಸ್, ಡಿ ಡಿ ಕೊಸಾಂಬಿಯವರ ಚಿಂತನೆಗಳಿಂದ ಪ್ರಭಾವಿತರಾಗಿ ಭಾರತದ ಆರ್ಥಿಕ ಅಸಮಾನತೆಗೆ ಜಾತಿ, ಹುಟ್ಟಿನ ಮೇಲೆ ಆರ್ಥಿಕ ಉತ್ಪಾದನಾ ಮೂಲಗಳು ಕೇಂದ್ರೀಕರಣಗೊಂಡಿರುವುದು ಕಾರಣವೆಂದು ನಂಬಿದ್ದರು.[5] ಈ ಅಸಮಾನತೆಯನ್ನು ನಿರ್ಮೂಲನೆ ಮಾಡಲು ಉತ್ಪಾದನಾ ಮೂಲಗಳನ್ನು ರಾಷ್ಟ್ರೀಕರಣಗೊಳಿಸಬೇಕೆಂದು ಜಗಜೀವನರಾಮರು ಸಂವಿಧಾನ ರಚನಾ ಸಭೆಯ ಮೂಲಭೂತ ಹಕ್ಕುಗಳ ಸಲಹಾ ಉಪಸಮಿತಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು ಅವುಗಳಲ್ಲಿ ಪ್ರಮುಖವಾದವುಗಳೆಂದರೆ

1. ಮುಖ್ಯ ಹಾಗೂ ಮೂಲ ಸ್ವರೂಪದ ಎಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸರ್ಕಾರವೇ ನಡೆಸಬೇಕು ಮತ್ತು ಅವುಗಳ ಮಾಲೀಕತ್ವವೂ ಸಹ ಸರ್ಕಾರದ ವಶದಲ್ಲಿರಬೇಕು.

2. ಎಲ್ಲಾ ಕೃಷಿ ಜಮೀನು ರಾಷ್ಟ್ರೀಕರಣಗೊಳ್ಳಬೇಕು.
3. ಕೇಂದ್ರ ಹಾಗೂ ರಾಜ್ಯದಲ್ಲಿ ಗೃಹ ನಿರ್ಮಾಣ ಮಂಡಳಿಗಳನ್ನು ರಚಿಸಿ ಅವುಗಳ ಮೂಲಕ ಪರಿಶಿಷ್ಟರಿಗೆ ಸೂಕ್ತ ಮನೆಗಳನ್ನು ಕಟ್ಟಿಸಿಕೊಡಬೇಕು. ಅರ್ಹ ಕೃಷಿಕರಿಗೆ ಭೂಮಿ ಹಂಚಿಕೆಯಾಗಲಿ ಮತ್ತು ಅದರ ಉಳುಮೆಯ ಕಾರ್ಯವನ್ನು ಸರ್ಕರದ ಸೂಕ್ತ ಉಸ್ತುವಾರಿಯಲ್ಲಿ ನಡೆಯುವಂತೆ ನೋಡಿಕೊಂಡು ಮದ್ಯವರ್ತಿಗಳಿಂದ ರೈತರ ಶೋಷಣೆ ತಪ್ಪಿಸಬೇಕು.
4. ಖಾಸಗಿ ಮಾಲೀಕತ್ವದಲ್ಲಿರುವ ಅಧಿಕ ವಿಸ್ತೀರ್ಣದ ಜಮೀನುಗಳನ್ನು ಸರ್ಕಾರ ಪರಿಹಾರ ಕೊಟ್ಟು ಸ್ವಾಧೀನಪಡಿಸಿಕೊಳ್ಳಬೇಕು
5. ದೇಶದ ಖನಿಜ ಸಂಪತ್ತು ರಾಜ್ಯ ಮತ್ತು ರಾಷ್ಟ್ರದ ಅಧೀನದಲ್ಲಿರಬೇಕು.[6]

ಬಾಬುಜಗಜೀವನರಾಮ್‌ರು ಖಾಸಗಿ ವಲಯಕ್ಕಿಂತಲೂ ಸಾರ್ವಜನಿಕ ವಲಯದಲ್ಲಿ ಹೆಚ್ಚಿನ ನಂಬಿಕೆ ಇಟ್ಟಿದ್ದರು ಎಂಬುದು ಇವರ ಈ ಮೇಲಿನ ಉಕ್ತಿಗಳಿಂದ ತಿಳಿಯಬಹುದು. ಕಾರ್ಮಿಕ ಕಾನೂನುಗಳನ್ನು ಖಾಸಗಿ ಕ್ಷೇತ್ರದಲ್ಲಿ ಜಾರಿಗೆ ತರಬೇಕೆಂದು ಹೇಳಿದರು. ಅವರು ವಿವಿಧ ಇಲಾಖೆಯಲ್ಲಿ ಮಂತ್ರಿಯಾಗಿದ್ದಾಗ ಬ್ಯಾಂಕುಗಳು, ವಿಮಾನ, ರೈಲ್ವೆಯಂತಹ ಸೇವೆಗಳನ್ನು ರಾಷ್ಟ್ರೀಕರಣ ಮಾಡಲು ಬೆಂಬಲಿಸಿದರು. ಆದರೆ ಪ್ರಸ್ತುತದ ಸರ್ಕಾರವು ರೈಲ್ವೆ, ವಿಮಾನಗಳನ್ನು ಖಾಸಗಿಯವರಿಗೆ ನೀಡುವುದರ ಮೂಲಕ ಜನಸಾಮಾನ್ಯರ ಅಭಿವೃದ್ಧಿಗೆ ಮಾರಕವಾಗುತ್ತಿರುವುದನ್ನು ಗುರುತಿಸಬಹುದು.

ಹಸಿರುಕ್ರಾಂತಿಯ ಹರಿಕಾರರೆಂದು ಹೆಸರಾದ ಬಾಬುಜಗಜೀವನರಾಮ್‌ರವರು ಎರಡು ಬಾರಿ ಆಹಾರ ಮತ್ತು ಕೃಷಿ ಖಾತೆಯ ಸಚಿವರಾಗಿ ದೇಶವನ್ನು ಅಭಿವೃದ್ಧಿಗೊಳಿಸಿದ್ದರು. ಇಡೀ ದೇಶ ಸಂಧಿಗ್ಧವಾದ ಆಹಾರ ಪರಿಸ್ಥಿತಿಯನ್ನು ಅನುಭವಿಸುತಿತ್ತು ಅಂತಹ ಕಠಿಣ ಸಂದರ್ಭದಲ್ಲಿ ಜಗಜೀವನರಾಮರು 1967ರ ಮಾರ್ಚ್ 16 ರಂದು ಆಹಾರ ಮತ್ತು ಕೃಷಿ ಸಚಿವಾಲಯದ ಜವಬ್ದಾರಿ ವಹಿಸಿಕೊಂಡು, ಎಂ.ಎಸ್ ಸ್ವಾಮಿನಾಥನ್ ಜೊತೆಗೂಡಿ 'ಹಸಿರುಕ್ರಾಂತಿಯ' ಮೂಲಕ ಪರಿಸ್ಥಿತಿಯನ್ನು ನಿಭಾಯಿಸುವ ಮೂಲಕ ಅಂದಿನ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಟ್ಟರು.[7]

ಬಾಬು ಜಗಜೀವನರಾಮರು ಪರಿಸ್ಥಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅಂದಿನ ಸಮಸ್ಯೆಗಳಿಗೆ ಯಾವ ಪರಿಹಾರ ಸೂಕ್ತವೋ ಅಂತಹದ್ದೇ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಆಹಾರ ಕೊರತೆಯಿಂದ ನರಳುತ್ತಿದ್ದಾಗ ಇವರು ಹೊಸ ಆಹಾರ ವ್ಯವಸ್ಥಾಪನಾ ನೀತಿಯನ್ನು ಕೈಗೊಂಡು ದೇಶೀಯ ಉತ್ಪಾದನೆ ಏರಿಕೆಯಾಗಲು ಶ್ರಮಿಸಿದರು. ಕೃಷಿಯಲ್ಲಿ ಆಧುನಿಕ ಯಂತ್ರೋಪಕರಣಗಳನ್ನು ಬಳಸಿದರು. ಅಧಿಕ ಇಳುವರಿ ನೀಡುವ ಬೀಜಗಳನ್ನು ತರಿಸಿ ಕೃಷಿಗೆ ಬಳಸಲಾಯಿತು. ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳ ಬಳಕೆಗೆ ಉತ್ತೇಜನ ನೀಡಿದರು. ಹಾಗೂ ದಾಸ್ತಾನುಗಳ ಅಭಿವೃದ್ಧಿಯ ಮೂಲಕ ದೇಶದ ಸ್ವಾವಲಂಬನೆಗೆ ಅಪಾರವಾಗಿ ಶ್ರಮಿಸಿದರು.[8]

ಭಾರತವು ಇಂದು ರಫ್ತು ಮುಂಚೂಣಿಯಲ್ಲಿರುವ ದೇಶಗಳಲ್ಲಿ ಒಂದಾಗಿದೆ. ಹಸಿರುಕ್ರಾಂತಿಯ ನಂತರ ಭಾರತದಲ್ಲಿ ದೇಶೀಯ ಉತ್ಪಾದನೆ ಹೆಚ್ಚಳಗೊಂಡು ದಾಸ್ತಾನುಗಳೂ ಸಹ ವೃದ್ಧಿಯಾದವು. ಆದರೆ ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಮಣ್ಣಿನ ಗುಣ ನಾಶಗೊಂಡಿತು. ವಾಯುಗುಣ ಕಲುಷಿತಗೊಂಡಿತು ಅನೇಕ ಸ್ಥಳೀಯ ತಳಿಗಳು ನಶಿಸಿಹೋದವು. ನೀರಾವರಿಯ ವಿಸ್ತರಣೆಗೆ ಕೈಗೊಂಡ ಕೊಳವೆ ಬಾವಿಗಳ ವಿಸ್ತ್ರತ ಬಳಕೆಯಿಂದ ಅಂತರ್ಜಲ ಕ್ಷೀಣಿಸುತ್ತಾ ಇದೆ. ಅರಣ್ಯಗಳು ನಾಶಗೊಂಡವು

ಹವಾಮಾನ ತಾಪಮಾನ ಹೆಚ್ಚಳಗೊಂಡು ಅನೇಕ ಸಮಸ್ಯೆಗಳು ಉಂಟಾದವು.[9] ಜಗಜೀವನರಾಮರು ಹಸಿರುಕ್ರಾಂತಿಯಲ್ಲಿ ಜಾರಿಗೊಳಿಸಿದ ಸುಧಾರಣೆಗಳು ಅಂದಿನ ಕಾಲಕ್ಕೆ ಯೋಗ್ಯವೇ ಆಗಿದ್ದು ಜನಸಾಮಾನ್ಯರನ್ನು ಅಭಿವೃದ್ಧಿಗೊಳಿಸಿದುದರಲ್ಲಿ ಸಂಶಯವೇ ಇಲ್ಲ ಆದರೆ ಬದಲಾದ ಪರಿಸ್ಥಿಯಲ್ಲಿ ಇಂದು ಭಾರತವು ಜನರ ಆರೋಗ್ಯದ ದೃಷ್ಟಿಯಿಂದ, ಪರಿಸರದ ಹಿತದೃಷ್ಟಿಯಿಂದ ರಾಸಾಯನಿಕಗಳನ್ನು ಕಡಿಮೆ ಉಪಯೋಗಿಸಿ, ಸಾವಯವ ಕೃಷಿಯನ್ನು ಅಳವಡಿಸಿಕೊಳ್ಳಬೇಕಾಗಿದೆ.

ಗ್ರಾಮೀಣ ಸಮಾಜದ ಒಟ್ಟಾರೆ ಪರಿವರ್ತನೆಗೆ ಅವಶ್ಯಕವಾದ ಭೂಸುಧಾರಣೆಗೆ ಜಗಜೀವನರಾಮರು ಅತ್ಯಂತ ಪ್ರಮುಖ ಸ್ಥಾನ ನೀಡಿದರು. 1969ರ ಏಪ್ರಿಲ್ 11 ರಂದು ಲೋಕಸಭೆಯಲ್ಲಿ ಭೂಸುಧಾರಣೆ ಅತ್ಯಂತ ತುರ್ತಾಗಿ ಆಗಬೇಕೆಂಬುದನ್ನು ಕೆಳಕಂಡಂತೆ ತಿಳಿಸಿದರು “ಮೂಲತಃ ನಮ್ಮದು ಕೃಷಿ ದೇಶ. ಸುಮಾರು ಶೇ.80ರಷ್ಟು ಜನ ಕೃಷಿ ಮೇಲೆ ಅಥವಾ ಕೃಷಿಯೊಂದಿಗೆ ಕೆಲಸ ಕಾರ್ಯಗಳ ಮೇಲೆ ಅವಲಂಬಿತರಾಗಿದ್ದಾರೆ. ಆದ್ದರಿಂದ ಭೂಸುಧಾರಣೆಗಳು ವೈಚಾರಿಕ ನೆಲೆ ಮತ್ತು ವೈಜ್ಞಾನಿಕವಾಗಿ ಆಧಾರಿತವಾಗಿರದಿದ್ದರೆ, ಅನೇಕ ಕ್ಷೇತ್ರಗಳಲ್ಲಿ ಉತ್ಪಾದನೆ ತೀವ್ರವಾಗಿ ತೊಂದರೆಗೊಳಗಾಗುತ್ತದೆ. ಆದ್ದರಿಂದ ಈ ಸಚಿವಾಲಯದ ಕೆಲಸ ನಾನು ವಹಿಸಿಕೊಂಡ ದಿನದಿಂದ ರಾಜ್ಯ ಸರ್ಕಾರಗಳನ್ನು ಒತ್ತಾಯಿಸಲು..... ಮೂಲಭೂತ ಭೂ ಸುಧಾರಣಾ ಕ್ರಮಗಳನ್ನು ಕೈಗೊಂಡಿಲ್ಲವೆಂದು ಕಾಂಗ್ರೆಸ್‌ನ ಮೇಲೆ ಅಪವಾದ ಹೊರಿಸುವ ಕಾಂಗ್ರೆಸ್ಸೇತರ ಸರ್ಕಾರಗಳನ್ನು ಒತ್ತಾಯಿಸಲು ಹೊರಟಿದ್ದೇವೆ. ಪ್ರಾರಂಭಿಕ ಹಂತದಲ್ಲಿ ಕಾಂಗ್ರೆಸ್ ಪ್ರಾಥಮಿಕ ಭೂಸುಧಾರಣೆಗಳನ್ನು ಕೈಗೊಂಡಿತು. ಜಮೀನ್ದಾರರು, ಇನಾಂದಾರರು, ಜಾಗೀರ್‌ದಾರರು ಮುಂತಾದವನ್ನು ರದ್ದುಗೊಳಿಸಿದ್ದು, ಅದರಲ್ಲೂ ನಮ್ಮ ದೇಶದಲ್ಲಿರುವ ಅವರ ಸಂಖ್ಯೆ ಪರಿಗಣಿಸಿದರೆ, ಅದೊಂದು ಯಾವುದೇ ದೇಶ ಹೆಮ್ಮೆ ಪಡಬಹುದಾದ ಸಾಧನೆಯೇ ಹೌದು. ಆದರೆ ಭೂಸುಧಾರಣೆಗಳನ್ನು ಅದರ ತಾರ್ಕಿಕ ಅಂತ್ಯದವರೆಗೆ ಕೊಂಡೊಯ್ಯಬೇಕು. ಮದ್ಯವರ್ತಿಗಳನ್ನು ನಿರ್ಮೂಲನೆ ಮಾಡಬೇಕು ಎಂದು ಹೇಳಿದ್ದರು.[10]

ಬಾಬುಜಗಜೀವನರಾಮರು ಭೂಸುಧಾರಣೆಯ ಮೂಲಕ ಭೂರಹಿತ ಕೃಷಿ ಕಾರ್ಮಿಕರಿಗೆ ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಭೂಮಿ ಸಿಗುವಂತೆ ಮಾಡಿದರು. ಗೇಣಿದಾರರ ಹಕ್ಕುಬಾಧ್ಯತೆಗಳನ್ನು ಎತ್ತಿ ಹಿಡಿದರು. ಜಮೀನ್ದಾರಿ ಪದ್ದತಿಯನ್ನು ರದ್ದುಗೊಳಿಸಿ ಉಳುವವನಿಗೆ ಭೂ ಒಡೆತನ ನೀಡಲು ಶ್ರಮಿಸಿದರು. ಅವರ ಭೂಸುಧಾರಣೆಯ ಕುರಿತ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ.

**ಉಪಸಂಹಾರ**

ಒಟ್ಟಾರೆ ಬಾಬುಜಗಜೀವನರಾಮರು ಸಮಾಜವಾದದ ಹಿನ್ನೆಲೆಯಲ್ಲಿ ರೂಪಿತವಾದ ಯೋಜನಾಬದ್ದ ಆರ್ಥಿಕತೆಯ ಮೂಲಕ ಸಮಾನತೆಯನ್ನು ಸಾಧಿಸಬಹುದೆಂದು ಆಶಿಸಿದ್ದರು ಅವರ ವೈಶಿಷ್ಟ್ಯವೆಂದರೆ ಅವರು ಚಿಂತಿಸಿದ್ದನ್ನು ಸರ್ಕಾರದ ಭಾಗವಾಗಿ ಅವುಗಳನ್ನು ಅನುಷ್ಠಾನಗೊಳಿಸಲು ಬದ್ಧರಾಗಿ ದುಡಿದದ್ದು. ಅವರ ಆರ್ಥಿಕ ಚಿಂತನೆಗಳು ಭಾರತ ರಾಷ್ಟ್ರವನ್ನು ಭೌತಿಕವಾಗಿ ಸದೃಢಗೊಳಿಸಲು ಹಾಗೂ ಆಂತರಿಕವಾಗಿ ಸಮಸಮಾಜದ ಸ್ಥಾಪನೆಯ ಪ್ರಕ್ರಿಯೆಗೆ ನೆರವಾದವು.

**ಕೊನೆಟಿಪ್ಪಣಿಗಳು**

1. ಸದಾಶಿವ ಕೆ. *ಬಾಬು ಜಗಜೀವನರಾಮ್ ಅವರ ಆರ್ಥಿಕ ಚಿಂತನೆಗಳು*, ಪು.ಸಂ.11
2. ಸದಾಶಿವ ಕೆ. *ಕಾರ್ಮಿಕ ಸಚಿವರಾಗಿ ಬಾಬು ಜಗಜೀವನರಾಮ್*. ಪು.ಸಂ. 5–6

3. ಅದೇ. ಪು.ಸಂ. 35
4. ಪೂರ್ವೋಕ್ತ 1. ಪು.ಸಂ. 39
5. ಅದೇ. ಪು.ಸಂ. 2–3
6. ಅದೇ. ಪು.ಸಂ. 7
7. ಸದಾಶಿವ ಕೆ. *ಕೃಷಿ ಮತ್ತು ಆಹಾರ ಸಚಿವರಾಗಿ ಜಗಜೀವನರಾಮ್*, ಪು.ಸಂ. 63
8. ಅದೇ. ಪು.ಸಂ. 2–23.
9. ಅದೇ. ಪು.ಸಂ. 65
10. ಅದೇ. ಪು.ಸಂ. 30–31

**ಪರಾಮರ್ಶನ ಗ್ರಂಥಗಳು**

- ಸದಾಶಿವ ಕೆ. (2015). *ಬಾಬು ಜಗಜೀವನರಾಮ್ ಅವರ ಆರ್ಥಿಕ ಚಿಂತನೆಗಳು.* ಪ್ರಿಯದರ್ಶಿನಿ ಪ್ರಕಾಶನ.
- ಸದಾಶಿವ ಕೆ. (2015). *ಕಾರ್ಮಿಕ ಸಚಿವರಾಗಿ ಬಾಬು ಜಗಜೀವನರಾಮ್.* ಪ್ರಿಯದರ್ಶಿನಿ ಪ್ರಕಾಶನ.
- ಸದಾಶಿವ ಕೆ. (2015). ಕೃಷಿ ಮತ್ತು ಆಹಾರ ಸಚಿವರಾಗಿ ಜಗಜೀವನರಾಮ್, ಪ್ರಿಯದರ್ಶಿನಿ ಪ್ರಕಾಶನ.